# ಯುಪಿಎಸ್ಸಿ ಎಂಜಿನಿಯರಿಂಗ್ ಸೇವಾ ಪರೀಕ್ಷೆ: ಎನ್‌ಐಟಿಕೆ ಹಳೆ ವಿದ್ಯಾರ್ಥಿ ಪ್ರಥಮ ರ‍್ಯಾಂಕ್

ಸುರತ್ಕಲ್, ಡಿ. 18: ಯುಪಿಎಸ್ಸಿ ಎಂಜಿನಿಯರಿಂಗ್ ಸರ್ವೀಸಸ್ ಪರೀಕ್ಷೆಯಲ್ಲಿ ಎನ್‌ಐಟಿಕೆ ಹಳೆ ವಿದ್ಯಾರ್ಥಿ ಹಿಮಾಂಶು ಥಾಪ್ಲಿಯಾಲ್ ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ.



2023ನೇ ಬ್ಯಾಚ್‌ನ ಎಂಟೆಕ್ ಪ್ರೋಗ್ರಾಂನ ಹಳೆ ವಿದ್ಯಾರ್ಥಿಯಾದ ಇವರು ಮೂಲತಃ ಉತ್ತರಾಖಂಡದವರು. ಹಿಮಾಂಶು ಥಾಪ್ಲಿಯಾಲ್ ಜೆಇಇ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು, ಎನ್‌ಐಟಿಕೆಯಲ್ಲಿ ಎಂಜಿನಿಯರಿಂಗ್ ಪದವಿ ಗಳಿಸಿದ್ದಾರೆ.

ಎನ್‌ಐಟಿಕೆ ಸುರತ್ಕಲ್ ನನಗೆ ಕಲಿಯಲು ಮತ್ತು ಬೆಳೆಯಲು ಅತ್ಯುತ್ತಮ ವೇದಿಕೆ ಒದಗಿಸಿದೆ. ಇಲ್ಲಿಂದಲೇ ಸಿವಿಲ್ ಸರ್ವಿಸ್‌ಗೆ ಸೇರುವ ಆಸೆ ಚಿಗುರೊಡೆಯಿತು ಎಂದು ಅವರು ಹೇಳಿದ್ದಾರೆ.

Udayavani, Date: 19/12/24, p, no - 11